REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 15 | ISSUE - 2 | NOVEMBER - 2025

# ಹೊರನಾಡು ಕನ್ನಡಿಗರು ಮತ್ತು ಕನ್ನಡ ಪ್ರಜ್ಞೆ

ಡಾ.ಮಹೇಶ ಫ. ಗಾಜಪ್ಪನವರ
ಸಹಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ,
ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.




ಜಾಗತೀಕರಣದ ಸಂದರ್ಭದಲ್ಲಿ ನಾವು ವಿಶ್ವದ ಜೊತೆ ಗುರುತಿಸಿಕೊಳ್ಳಬೇಕು. ಇನ್ನೊಂದೆಡೆ ನಮ್ಮತನವನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಇಂದು ಎದುರಾಗಿದೆ. ಇವೆರಡು ವೈರುಧ್ಯಗಳ ನಡುವೆ ನಮಗರಿವಿಲ್ಲದೆ ಜಾಗತೀಕರಣ ಮುಕ್ತ ಮಾರುಕಟ್ಟೆ, ವಿಶ್ವ ಗ್ರಾಮದಂತಹ ಶಕ್ತಿಗಳನ್ನು ವಿರೋಧಿಸುತ್ತಲೇ ಅಪ್ಪಿಕೊಳ್ಳುವುದೇ ಸಾಮಾನ್ಯವಾಗಿದೆ.
ಪ್ರಸ್ತುತ ಸಂದರ್ಭದಲ್ಲಿ ಬದುಕನ್ನು ಕಟ್ಟಿಕೊಳ್ಳಲು ಅವಕಾಶಕ್ಕೆ ತಕ್ಕ ಪುರಸ್ಕಾರವನ್ನು ಪಡೆಯಲು ಕನ್ನಡಿಗರು ಗಡಿನಾಡುಗಳಿಗೆ ಹೊರರಾಜ್ಯಗಳಿಗೆ ವಿದೇಶಗಳಿಗೆ ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗಿದೆಯೇ ಅಂತಲೇ ಹೇಳಬಹುದು. ಹೀಗೆ ವಲಸೆ ಹೋದ ಕನ್ನಡಿಗರು ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಿನ ಅನುಭವ ಪಡೆದು ಪ್ರತಿಭೆಗೆ ತಕ್ಕ ಪ್ರತಿಫಲ ದೊರೆಯಲು ಶುರುವಾದಾಗ ಅಲ್ಲಿಯೇ ನೆಲೆಯೂರುವ ಯೋಜನೆಯೂ ಬಲವಾಯಿತೆನ್ನಬಹುದು.  ಇಂತಹ ಸಂದರ್ಭದಲ್ಲಿಯೇ ಪರಕೀಯತೆ ಭಾವ ಆವರಿಸಿ ಒಂದು ರೀತಿಯ ಅನನ್ಯತೆಯ ಹುಡುಕಾಟ ಬಲವಾಗಲು ಕಾರಣವಾದವು ಎನ್ನಬಹುದು.  ಹೀಗೆ ವಲಸೆ ಹೋದ ಕನ್ನಡಿಗರು ಕೂಟ ಜೀವನದ ಉಲ್ಲಾಸವನ್ನು ಕಂಡುಕೊಳ್ಳಲು ಸೃಜನಶೀಲ ಆಸಕ್ತಿಗಳನ್ನು ಬೆಳೆಸಲು ಭಾರತ ಹಾಗೂ ಅದರಾಚೆಯ ದೇಶದಲ್ಲಿ ನೆಲೆಸಿರುವ ಕನ್ನಡಿಗರು ಸಂಘಟನೆಗಳನ್ನು ಮಾಡಿಕೊಂಡಿರುವುದು ಸಂತೋಷದ ವಿಷಯ.

ಮನುಷ್ಯ ಬದುಕಲು ತನ್ನ ಸುತ್ತಲೂ ಒಂದು ಸಮಾಜ ಕಟ್ಟಿಕೊಂಡಿರುತ್ತಾನೆ ಮತ್ತು ಪರಸ್ಪರ ಸಹಕಾರದ ಆಧಾರದ ಮೇಲೆ ಬದುಕು ಸಾಗಿಸಬೇಕಾಗುತ್ತದೆ. ಸಮಾಜದ ಅಡಿಯಲ್ಲಿ ಸಹಕಾರವಾಗಿರುವಾಗ ಅಂತಹ ಸಹಕಾರಕ್ಕೆ ಪ್ರಮುಖ ಸಾಧನ ಆ ಜನರಾಡುವ ನುಡಿ, ಭಾಷೆ ಸಮಾಜದ ಸಂಪರ್ಕ ಮಾಧ್ಯಮ ಮಾತ್ರವಲ್ಲ, ಅದು ಒಂದು ಭಾಷಕರ ನಡುವಿನ ಸಹಕಾರದ ಮಾಧ್ಯಮ ಕೂಡ.  ಇಂದು ಬೇರೆ ಬೇರೆ ದೇಶಗಳನ್ನು ಒಮ್ಮೆ ಹತ್ತಿರದಿಂದ ನೋಡಿದರೆ ಅವರೆಲ್ಲರೂ ತಮ್ಮ ಸಮಾಜವನ್ನು ತಮ್ಮ ಭಾಷೆಯ ಸುತ್ತಲೇ ಕಟ್ಟಿಕೊಂಡಿರುವುದನ್ನು ಕಾಣಬಹುದು.  ಅವರು ತಮ್ಮ ಭಾಷೆಯಲ್ಲಿಯೇ ಕಲಿಕೆ, ದುಡಿಮೆಯ ಏರ್ಪಾಡುಗಳನ್ನು ಆಡಳಿತವನ್ನು ಕಲ್ಪಿಸಿಕೊಂಡಿದ್ದಾರೆ. ಇದರಿಂದ ಸಹಜವಾಗಿ ಒಗ್ಗಟ್ಟು ಹೆಚ್ಚಾಗಿ ಸಾಧಿಸುವ ಛಲ ಕಲ್ಪಿಸಿದೆ.

ಇದೇ ಪರಿಕಲ್ಪನೆಯಲ್ಲಿ ಕನ್ನಡ ಸಮಾಜವನ್ನು ನೋಡಿದಾಗ ಜಾತಿ–ಧರ್ಮ–ಪ್ರಾಂತ್ಯದ ಕವಲುಗಳು ನಮ್ಮ ಕನ್ನಡಿಗರನ್ನು ಕನ್ನಡದಿಂದಲೇ ದೂರ ಸರಿಸುತ್ತವೆ.  ಜೊತೆಗೆ ರಾಜಕೀಯ, ಸಮಾಜ, ವ್ಯಾಪಾರ, ಸಂಸ್ಕೃತಿ ಹೀಗೆ ಬದುಕಿನ ಎಲ್ಲಾ ಅಂಗಗಳಲ್ಲಿ ಕನ್ನಡಿಗರು ಹಿಂಬಾಲಕರಾಗಿ ಉಳಿಯುವ ಪರಿಸ್ಥಿತಿ ನಮ್ಮ ಮುಂದೆ ಇದೆ.  ಇಷ್ಟು ವ್ಯಾಪಕವಾದ ತೊಂದರೆಗಳ ಕನ್ನಡಿಗರ ಕಲಿಕೆ ಮತ್ತು ದುಡಿಮೆಯ ವಿಷಯದಲ್ಲಿ ಕಾಣಿಸುತ್ತಿವೆ.

ಇನ್ನು ಶಿಕ್ಷಣದ ವಿಷಯಕ್ಕೆ ಬಂದಾಗ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲೀಷ್ ಭಾಷೆ ಸಾರ್ವತ್ರಿಕವಾಗಿರುವುದಲ್ಲದೇ ಅದರ ಬಳಕೆ ಮುಂದಿನ ಅವಕಾಶಗಳಿಗೆ ದಾರಿ ಎಂದು ಸಾಕಷ್ಟು ಜನ ನಂಬಿರುವುದು ವಲಸೆ ಹೋಗಿರುವ ಪ್ರದೇಶದಲ್ಲಿ ಮಾತೃಭಾಷೆಯ ಕಲಿಕೆಯ ಅವಕಾಶ ಇಲ್ಲದೇ ಇರುವುದು ಕನ್ನಡ ಕಲಿಯಲು, ಅರಿಯಲು ಅಡೆತಡೆಗಳಿವೆ.

ಇವೆಲ್ಲ ಸಮಸ್ಯೆಗಳ ನಡುವೆ ಭಾರತದಾದ್ಯಂತ ಚದುರಿ ಹೋಗಿರುವ ಕನ್ನಡಿಗರು ತಮ್ಮದೇ ಆದ ಒಂದು ಕನ್ನಡ ಸಂಘವನ್ನು ಸ್ಥಾಪಿಸಿಕೊಂಡು ಕನ್ನಡ ಭಾಷೆ, ನಾಡು–ನುಡಿಯ ಕುರಿತು ತಮ್ಮ ಅಭಿರುಚಿ ಹವ್ಯಾಸದ ನೆಲೆಯಲ್ಲಿ ವಿವಿಧ

ಸಾಹಿತ್ಯಿಕ, ಸಾಂಸ್ಕೃತಿಕ, ಕಾರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ತಮ್ಮ ಮುಂದಿನ ಪೀಳಿಗೆಗೆ ಕನ್ನಡ ಪ್ರಜ್ಞೆಯನ್ನು ಬೆಳೆಸುತ್ತಿರುವುದು ಸಂತಸದ ವಿಷಯ. ಭಾರತದಲ್ಲಿ ದೆಹಲಿ, ಮುಂಬಯಿ, ಪುಣೆ, ಚೆನ್ನೈ, ಹೈದರಾಬಾದ್, ಕೊಚ್ಚಿ, ಪಾಂಡಿಚೇರಿ, ವಿಶಾಖಪಟ್ಟಣಗಳಲ್ಲಿ ಕನ್ನಡಿಗರು ಒಕ್ಕೂಟಗಳನ್ನು ಮಾಡಿಕೊಂಡು ಸಾಹಿತ್ಯ, ಪತ್ರಿಕೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮ್ಮೇಳನಗಳನ್ನು ಮಾಡುವ ಮೂಲಕ ಕನ್ನಡತನವನ್ನು ಮತ್ತಷ್ಟು ಗಟ್ಟಿಯಾಗಿಸುವಲ್ಲಿ ಸಫಲವಾಗುತ್ತಿದ್ದಾರೆ.

ಜೊತೆಗೆ ಹೊರನಾಡು ಕನ್ನಡಿಗರು ಕನ್ನಡಕ್ಕೆ ಸಂಬಂಧಿಸಿದಂತೆ ಗ್ರಂಥಾಲಯಗಳನ್ನು ತೆರೆದಿರುವುದು ವಿಶೇಷ. ಕೆಲವು ಹೊರರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗಗಳನ್ನು ನಡೆಸಲಾಗುತ್ತದೆ. ಇದರ ಉಪಯೋಗವನ್ನು ಕನ್ನಡಿಗರು ತೆಗೆದುಕೊಳ್ಳುತ್ತಿರುವುದು ಉತ್ತಮವಾದ ಬೆಳವಣಿಗೆಗಳಾಗಿವೆ. ಹೊರನಾಡಿನ ಕನ್ನಡಿಗರಲ್ಲಿ ಭಾರತದಲ್ಲಷ್ಟೇ ಅಲ್ಲ ವಿದೇಶದಲ್ಲಿ ನೆಲೆಸಿರುವ ಕನ್ನಡಿಗರು ಕನ್ನಡ ಕೂಟ, ಕನ್ನಡ ಸಂಘಗಳನ್ನು ರಚಿಸಿಕೊಂಡಿದ್ದಾರೆ. ಮೊದಲು ೨೧ ಸಂಘಗಳು ಇದ್ದವು. ಅದು ಈಗ ೪೧ಕ್ಕೆ ಏರಿರುವುದು ಸಂತಸದ ವಿಷಯ. ಇವೆಲ್ಲವು ಒಂದುಗೂಡಿ ವಿಶ್ವಮಟ್ಟದಲ್ಲಿ 'ಅಕ್ಕ' ಸಮ್ಮೇಳನವನ್ನು ವಾರ್ಷಿಕವಾಗಿ ಆಯೋಜಿಸಿ ಸಾಹಿತಿಗಳು, ಕಲಾವಿದರನ್ನು ಆಹ್ವಾನಿಸಿ ಗೌರವಿಸುವ ಮೂಲಕ ಮುಂದಿನ ಪೀಳಿಗೆಗೆ ಕನ್ನಡ ಪ್ರಜ್ಞೆಯನ್ನು ಮೂಡಿಸುತ್ತಿರುವುದು ವಿಶೇಷ. ಇಂದಿನ ತಂತ್ರಜ್ಞಾನದ ಯುಗದಲ್ಲಿ ಕನ್ನಡಿಗರು ಅಂತರ್ಜಾಲದ ಮುಖಾಂತರ ಕನ್ನಡದೊಂದಿಗೆ ಸಾಹಿತ್ಯಿಕವಾಗಿ ಸಂಪರ್ಕವನ್ನು ಹೊಂದಿದ್ದಾರೆ. ನಿಯತಕಾಲಿಕೆ ಪತ್ರಿಕೆಗಳ ಪ್ರಕಟಣೆಯ ಜೊತೆಗೆ ವೃತ್ತಿಯ ಜೊತೆಗೆ ಕನ್ನಡ ಸಾಹಿತ್ಯ ಕೃಷಿಯನ್ನು ಕೂಡ ಮಾಡುತ್ತಿರುವುದು ವಿಶೇಷ.

ಕನ್ನಡ ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸುವಲ್ಲಿ ಹೊರನಾಡಿನ ಕನ್ನಡಿಗರ ಶ್ರಮ ಅದ್ಭುತವಾದುದು. ಇದಕ್ಕೆ ಬೆಂಬಲವಾಗಿ ಈ ಕನ್ನಡ ಪ್ರಜ್ಞೆಯನ್ನು ಉಳಿಸುವ, ಬೆಳೆಸುವ ಜವಾಬ್ದಾರಿ ನಮ್ಮ ಕರ್ನಾಟಕ ಸರ್ಕಾರದ ಹೆಗಲ ಮೇಲೆ ಇದೆ. ಇವರು ಸರಕಾರದ ವತಿಯಿಂದ ಹೊರನಾಡಿನ ಕನ್ನಡಿಗರಿಗೆ ನಿಯತವಾಗಿ ಸಲಹೆ, ಸಹಕಾರ, ಸಂಪರ್ಕದ ಮೂಲಕ ಕ್ರಮಬದ್ಧ ಕ್ರಿಯಾ ಯೋಜನೆಗಳನ್ನು ರೂಪಿಸುವ ಮೂಲಕ ಕನ್ನಡ ಪ್ರಜ್ಞೆಯನ್ನು ಮೂಡಿಸಬಹುದಾಗಿದೆ.

ಕನ್ನಡಿಗರು ಹೆಚ್ಚಾಗಿರುವ ಸ್ಥಳಗಳಲ್ಲಿ ಕನ್ನಡ ಸಂಸ್ಕೃತಿ ಕೇಂದ್ರವನ್ನು ತೆರೆಯುವ ಮೂಲಕ ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಮನ್ವಯಗೊಳಿಸಿ ನೆರವಾಗಬಹುದಾಗಿದೆ.

ಹೊರನಾಡಿನ ಕನ್ನಡಿಗರು ನಡೆಸುತ್ತಿರುವ ಗ್ರಂಥಾಲಯಗಳು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಒದಗಿಸುವ ಕಾರ್ಯ ಮಾಡಿದರೆ ಕನ್ನಡ ಪ್ರಜ್ಞೆ ಜಾಗೃತಿಗೊಳಿಸಲು ಸಹಾಯವಾಗುತ್ತದೆ.

ಒಟ್ಟಾರೆಯಾಗಿ ಹೊರನಾಡಿನ ಕನ್ನಡಿಗರು ತಮ್ಮ ಅನನ್ಯತೆಯ ಹುಡುಕಾಟದ ನಡುವೆ ತಾಯ್ನೆಲದ ಬೇರಾದ ಕನ್ನಡ ಭಾಷೆಯನ್ನು ಜೀವಂತವಾಗಿರಿಸಿ ಅದನ್ನು ಉಳಿಸಿ ಬೆಳೆಸುವಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿರುವುದು ಸಂತಸದ ವಿಷಯ.

## ಆಧಾರ ಗ್ರಂಥಗಳು :


(೧) ಕನ್ನಡ ಪ್ರಜ್ಞೆ – ಪ್ರೊ.ಬರಗೂರು ರಾಮಚಂದ್ರಪ್ಪ, ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೩.

(೨) ಕನ್ನಡ, ಕನ್ನಡಿಗ, ಕರ್ನಾಟಕ – ಸಂ.ಪ್ರೊ.ಎಲ್.ಎಸ್. ಶೇಷಗಿರಿರಾವ್, ಡಾ.ಎಂ. ಚಿದಾನಂದಮೂರ್ತಿ, ರಾ.ನಂ. ಚಂದ್ರಶೇಖರ, ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೬.